( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಓ.ಎಸ್.ನಂ. 281/2012

ದಿನಾಂಕಃ 03-06-2019, ಪಿಡಬ್ಲ್ಯೂ–1

ಮುಂದುವರೆದ ಪಾಟೀ ಸವಾಲು ಃ ಶ್ರೀ ಎಲ್ ಡಿ ಜಿ ವಕೀಲರಿಂದಃ

ಪ್ರತಿವಾದಿಯರು ನನ್ನ ವಿರುದ್ದ ತಹಶೀಲ್ದಾರ್ ರವರಿಗೆ ದಾವಾ ಸ್ವತ್ತಿನ ಕುರಿತು ತೊಂದರೆ ಕೊಡುತ್ತಿದ್ದಾರೆ ಎಂದು ದೂರು ನೀಡಿದ್ದಾರೆ ಎಂದರೆ ಸರಿ. ತಹಶೀಲ್ದಾರ್ ರವರು ಸ್ಥಳ ಪರೀಶೀಲನೆ ಮಾಡಿ ಸದರಿ ದೂರಿಗೆ ಸಂಬಂದಿಸಿದಂತೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಆದೇಶ ನೀಡಿದರು ಎಂದರೆ ಸಾಕ್ಷಿಯು ತಹಶೀಲ್ದಾರವರೇ ಸ್ಥಳ ಪರಿಶೀಲನೆ ಮಾಡಿ ನಾವೇ ಸ್ವಾಧೀನದಲ್ಲಿದ್ದೇವೆ ಎಂದು ದಾಖಲೆಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ತಹಶೀಲ್ದಾರ್ ರವರು ಸ್ಥಳ ಪರಿಶೀಲನೆಗಿಂತ ಮುಂಚಿತವಾಗಿ ನಮಗೆ ನೋಟೀಸನ್ನು ಜಾರಿ ಮಾಡಿರುತ್ತಾರೆ ಎಂದರೆ ಸುಳ್ಳು. ಅನುಬೋಗದ ಪ್ರಕಾರ ನಕ್ಷೆಯನ್ನು ತಯಾರಿಸಿದ್ದಾರೆ ಎಂದರೆ ಸರಿ.

ಸದರಿ ನಕ್ಷೆಯಲ್ಲಿ ತಿಮ್ಮಮ್ಮ 1 ಎಕರೆ 4 ಗುಂಟೆ, ಮರಿಬೆಟ್ಟನಅಣ್ಣಯ್ಯ 1 ಎಕರೆ 4 ಗುಂಟೆ, ಸುಬ್ಬೇಗೌಡ 1 ಎಕರೆ 4 ಗುಂಟೆ ಅನುಬೋಗದಲ್ಲಿ ಇದ್ದಾರೆ ಎಂದು ನಕ್ಷೆ ತಯಾರಿಸಿದ್ದಾರೆ ಎಂದರೆ ಸುಳ್ಳು. ಗ್ರಾಮಸ್ಥರ ಸಮಕ್ಷಮ ಸದರಿ ನಕ್ಷೆಯ ರೀತ್ಯಾ ಮಹಜರ್ ತಯಾರಿಸಿ ಪ್ರತಿವಾದಿಯರು ಸ್ವಾಧೀನದಲ್ಲಿದ್ದಾರೆಂದು ಗ್ರಾಮಸ್ಥರ ಸಹಿಯನ್ನು ಪಡೆದು, ಸ್ಥಳ ಮಹಜರ್ ತಯಾರಿಸಿದ್ದಾರೆ ಎಂದರೆ ಸುಳ್ಳು.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶಕೋರಿದ್ದು, ಮಂಜೂರು ಮಾಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀ ಸಿದ್ಧನಗೌಡ ಪಾಟೀಲ್ ಟಿ)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು